ಅಭಿವೃದ್ಧಿ ಕಾರ್ಯಕ್ರಮಗಳು ಸ್ಥಗಿತಗೊಂಡಿವೆ. ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಂತೆ ಇರಬಹುದು, ಮಲೆನಾಡು ಅಭಿವೃದ್ಧಿ ಮಂಡಲಿಗೆ ಸಂಬಂಧಪಟ್ಟಂತೆ ಇರಬಹುದು ಹೈದರಾಬಾದ್ ಕರ್ನಾಟಕಕ್ಕೆ ಸಂಬಂಧಪಟ್ಟಂತೆ, ಇರಬಹುದು. 1996-97ನೇ ಸಾಲಿನಲ್ಲಿ ಸರಕಾರದವರೇನು ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದರು ಅದಕ್ಕೆ ಈ ಹಣವನ್ನು ಮತ್ತೆ ರೀ ಅಪ್ರೋಪ್ರಿಯೇಟ್ ಮಾಡಿ ಅಲೋಕೇಷನ್ ಮಾಡಿಕೊಟ್ಟರೆ ಅಭಿವೃದ್ಧಿ ಕಾರ್ಯಗಳು ಸುಲಲಿತವಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ಕೆಲವು ಅನುಪಯುಕ್ತವಾಗಿ ಆಗತಕ್ಕಂತಹ ಕೆಲಸ ಕಾರ್ಯಗಳಿಗೆ ಈ ಹಣವನ್ನು ಖರ್ಚು ಮಾಡಲಿಕ್ಕೆ ಈ ಸಲ ಸರಕಾರಕ್ಕೆ ಇಷ್ಟ ಇಲ್ಲ. ಕುಡಿಯುವ ನೀರಿಗೆ ಬೇರೆ ಗ್ರಾಮಗಳಿಗೆ ಹಣ ಕೊಡತಕ್ಕಂತಹ ವ್ಯವಸ್ಥೆ ಇದೆ. ಅದೇ ರೀತಿ ಜಿಲ್ಲಾ ಪಂಚಾಯತಿಯವರು ನೀರು ಕೊಡುತ್ತಾರೆ. ಅದೇ ರೀತಿ ರಸ್ತೆ ಮಾಡಬೇಕೆಂದರೆ ಅದಕ್ಕೆ ಬೇರೆ ವ್ಯವಸ್ಥೆ ಇದೆ. ಮಲೆನಾಡು ಅಭಿವೃದ್ಧಿ ಮಂಡಲಿಗೆ ಬೇರೆ ಹಣ ಇದೆ. ಬೇರೆ ವ್ಯವಸ್ಥೆ ಇದೆ. ಎಸ್.ಇ.ಪಿ. ಹಣವೇ ಏಕೆ ಬೇಕು? ಬರೀ ಎಸ್.ಇ.ಪಿ. ಇರತಕ್ಕಂತಹ ಸಮುದಾಯಕ್ಕೆ ನೀರು, ರಸ್ತೆ ಕೊಡತಕ್ಕಂಥಾದ್ದಲ್ಲ. ಈ ವಿಷಯದಲ್ಲಿ ಸದಸ್ಯರೊಂದಿಗೆ ಹೊಂದಾಣಿಕೆ ಇಲ್ಲ. ಈ ಎಲ್ಲಾ ಹಣವನ್ನು ತೆಗೆದು ಉಪಯುಕ್ತವಾದ ಕೆಲಸಕ್ಕೆ ಖರ್ಚು ಮಾಡಬೇಕಾಗುತ್ತದೆ.

ಅಧ್ಯಕ್ಷರು:- ಈ ವಿಷಯವನ್ನು ಬೇಕಾದರೆ ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳೋಣ. ಈಗಾಗಲೇ ಈ ವಿಷಯದ ಬಗ್ಗೆ ಹತ್ತು ನಿಮಿಷ ಚರ್ಚೆ ಮಾಡಿದ್ದರೂ ಇನ್ನು ತೃಪ್ತಿಯಾಗಿಲ್ಲ. ಎಲ್ಲಾ ಸದಸ್ಯರೂ ಈ ವಿಚಾರದಲ್ಲಿ ಬಹಳ ಉತ್ಸಾಹದಿಂದ ಮಾತನಾಡಬೇಕೆಂದು ಇರುವುದರಿಂದ ಈ ವಿಷಯದ ಮಹತ್ವವನ್ನು ಅರಿತು ಅರ್ಧಗಂಟೆ ಚರ್ಚೆಗೆ ಕಾಲಾವಧಿಯನ್ನು ನೋಡಿಕೊಂಡು ಸಮಯವನ್ನು ಗೊತ್ತುಮಾಡಿಕೊಡುತ್ತೇನೆ. ಆಗ ಎಲ್ಲಾ ಸದಸ್ಯರೂ ಚರ್ಚೆಯಲ್ಲಿ ಭಾಗವಹಿಸಬಹುದು. ಈಗ ಪ್ರಶ್ನೋತ್ತರ ಮುಗಿದಿದೆ.

4. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):- ದಿನಾಂಕ 13ನೇ ಫೆಬ್ರವರಿ 1997ರ ಎರಡನೆಯ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 37 ಪ್ರಶ್ನೆಗಳ ಪೈಕಿ 27 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ಹುಬ್ಬಳ್ಳಿ-ಧಾರವಾಡ ನಗರ ನೀರು ಸರಬರಾಜು ಹಾಗೂ ಒಳಚರಂಡಿ ನಿರ್ಮಾಣಕ್ಕೆ ಮಂಜೂರಾದ ಹಣ.

28(134)

ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ಶಹರ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1995-96ನೇ ಸಾಲಿನಲ್ಲಿ ನಗರ ನೀರು ಸರಬರಾಜು ಹಾಗೂ ಒಳಚರಂಡಿ ನಿರ್ಮಾಣಕ್ಕಾಗಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸರ್ಕಾರದಿಂದ ಮಂಜೂರಾದ ಹಣವೆಷ್ಟು? ಈ ಪೈಕಿ ಖರ್ಚಾದ ಹಣವೆಷ್ಟು ; (ಕ್ಷೇತ್ರವಾರು ಕಾಮಗಾರಿವಾರು ವಿವರ ನೀಡುವುದು).

ಆ) ಒಳಚರಂಡಿ ಹೊಂದಿರುವ ಪ್ರದೇಶಗಳನ್ನು ಗುರುತಿಸಲಾಗಿದಯೇ? ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) 1995-96ನೇ ಸಾಲಿನಲ್ಲಿ ನಗರ ನೀರು ಸರಬರಾಜು ಮತ್ತು ಒಳಚರಂಡಿಗಳಿಗಾಗಿ ಹುಬ್ಬಳ್ಳಿ-ಧಾರವಾಡ ಅವಳಿ ಪಟ್ಟಣಗಳಿಗೆ ಈ ಕೆಳಕಂಡಂತೆ ಹಣವನ್ನು ಒದಗಿಸಲಾಗಿದೆ:

1. ಹುಬ್ಬಳ್ಳಿ-ಧಾರವಾಡ ಹಲಸಂಗ್ರಹಾಲಯ ಮತ್ತು ವಿತರಣಾ ಜಾಲ ನವೀಕರಣ ಕೆಲಸಕ್ಕೆ ಹುಡ್ಕೋದಿಂದ ರೂ. 114.73 ಲಕ್ಷಗಳು ಒದಗಿಸಲಾಗಿದ್ದು, ಮಂಡಳಿಯು ರೂ. 127.04 ಲಕ್ಷಗಳನ್ನು ಖರ್ಚು ಮಾಡಿದೆ.

2. ಹುಬ್ಬಳ್ಳಿ-ಧಾರವಾಡ ನಗರಕ್ಕೆ ಮಲಪ್ರಭಾ ಎರಡನೇ ಹಂತದ ನೀರು ಸರಬರಾಜಿಗೆ ರೂ. 41.44 ಲಕ್ಷಗಳು ಹುಡ್ಕೋದಿಂದ ಹಾಗೂ ರೂ. 66.66 ಲಕ್ಷಗಳು ಸ್ಥಳೀಯ ಸಂಸ್ಥೆಯಿಂದ ಒದಗಿಸಲಾಗಿತ್ತು. ಈ ಪೈಕಿ ರೂ. 1.01 ಲಕ್ಷಗಳು ಖರ್ಚಾಗಿವೆ.

   ಈ ಯೋಜನೆಯನ್ನು ಒಟ್ಟಾರೆಯಾಗಿ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಕೈಗೊಂಡಿರುವುದರಿಂದ ಕ್ಷೇತ್ರವಾರು: ಕಾಮಗಾರಿವಾರು ವಿವರ ಲಭ್ಯವಿರುವುದಿಲ್ಲ.

   ಮೇಲಿನ ಯೋಜನೆಗಳಿಂದ ಹುಬ್ಬಳ್ಳಿ-ಧಾರವಾಡ ಅವಳಿ ಪಟ್ಟಣಗಳಿಗೆ ಹೆಚ್ಚಿನ ನೀರು ಸರಬರಾಜನ್ನು ಮಾಡಲು ಅನುವಾಗಿದೆ.

ಆ) ಒಳಚರಂಡಿ ಹೊಂದಿರದ ಪ್ರದೇಶಗಳನ್ನು ಗುರುತಿಸಿ, 1988-89ನೇ ಸಾಲಿನಲ್ಲಿ ವಿಶ್ವಬ್ಯಾಂಕ್ ನೆರವಿಗಾಗಿ 53.2 ಲಕ್ಷ ರೂ.ಗಳ ಅಂದಾಜನ್ನು ತಯಾರಿಸಲಾಗಿದೆ. ಅದಕ್ಕೆ ಸರ್ಕಾರದ ಮಂಜೂರಾತಿ ದೊರೆಯಲಿಲ್ಲ. ಈಗ ಈ ಯೋಜನೆಗೆ ಸಮರ್ಪಕ ವರದಿಯನ್ನು ಸಮಾಲೋಚಕರವರಿಂದ (ಕನ್ಸಲ್ಟೆಂಟ್) ಪಡೆದು ಹೊರಗಡೆಯಿಂದ ಆರ್ಥಿಕ ಸಹಾಯವನ್ನು ಪಡೆಯಲು ಪ್ರಸ್ತಾಪಿಸಲಾಗುವುದು.

ವಿಷಯ:- 1995-96ನೇ ಸಾಲಿನಲ್ಲಿ ಹಾನಿಗೀಡಾದ ಕಬ್ಬಿನ ಪ್ರಮಾಣ.

29(135)

ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1995-96ನೇ ಸಾಲಿನಲ್ಲಿ ಅರೆಯದೆ ಹಾನಿಗೀಡಾದ ಕಬ್ಬಿನ ಪ್ರಮಾಣವೆಷ್ಟು; ಈ ಬಗ್ಗೆ ಸರ್ಕಾರ ಪರಿಹಾರ ನೀಡಲು ಕ್ರಮ ಕೈಗೊಂಡಂತೆ ಹಾಗಿದ್ದಲ್ಲಿ ವಿವರ ನೀಡುವುದು;